**Akashvani : Bangalore**
**Regional Bulletin In Kannada**
**23.11.2026 / 19.35 hrs**
**ಆಕಾಶವಾಣಿ ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

---

ಮುಖ್ಯಾಂಶಗಳು

- ಭಾರತ-ನೇಪಾಳ ನಡುವೆ ಎಂಟು ಒಪ್ಪಂದಗಳಿಗೆ ಸಹಿ; ೨೪ ಸಾವಿರ ಕೋಟಿ ನೇಪಾಳಿ ರೂಪಾಯಿ ಮೌಲ್ಯದ ಅಭಿವೃದ್ಧಿ ಸಹಕಾರ ಪ್ಯಾಕೇಜ್ ಘೋಷಣೆ
- ಸರ್ಕಾರದ ಸಮಗ್ರ ವಿಧಾನದ ಮೂಲಕ ೫೦ ಕೋಟಿ ಜನರು ತೀವ್ರ ಬಡತನದಿಂದ ಮುಕ್ತ - ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್
- ವಾಟ್ಸಾಪ್ ವೆಬ್ ಬಳಸುವಾಗ ಎಚ್ಚರಿಕೆ ವಹಿಸುವಂತೆ ಬಳಕೆದಾರರಿಗೆ ಕೆಂದ್ರ ಗೃಹ ಸಚಿವಾಲಯ ಸಲಹೆ
- ಡಿಜಿಟಲ್ ಪಾವತಿ ವಂಚನೆ ತಡೆಗೆ ಹೆಚ್ಚುವರಿ ಸುರಕ್ಷತಾ ಕ್ರಮ ಪ್ರಸ್ತಾವಿಸಿದ ಆರ್‌ಬಿಐ
- ನ್ಯೂಜಿಲೆಂಡ್ ವಿರುದ್ಧದ 'ಸೆಂಚುರಿ ಆಫ್ ಸ್ಪೋರ್ಟಿಂಗ್ ಯೂನಿಟಿ' ಹಾಕಿ ಸರಣಿ ಗೆದ್ದ ಭಾರತ

---

ಭಾರತ ಮತ್ತು ನೇಪಾಳ ವಿವಿಧ ಕ್ಷೇತ್ರಗಳಲ್ಲಿ ಸಹಕಾರ ಬಲವರ್ಧಿಸುವ ನಿಟ್ಟಿನಲ್ಲಿ ಇಂದು ಎಂಟು ಒಪ್ಪಂದಗಳಿಗೆ ಸಹಿ ಹಾಕಿವೆ.

ಆರೋಗ್ಯ, ಸಾಂಪ್ರದಾಯಿಕ ವೈದ್ಯಕೀಯ, ಉಪಗ್ರಹ ಸಂವಹನ ಜಾಲ ಸ್ಥಾಪನೆ, ಸಾಮರ್ಥ್ಯ ವೃದ್ಧಿ ತರಬೇತಿ ಕಾರ್ಯಕ್ರಮ, ಸುಸ್ಥಿರ ನಗರಾಭಿವೃದ್ಧಿ, ಶೈಕ್ಷಣಿಕ ಮತ್ತು ಸಂಶೋಧನೆ ಹಾಗೂ ಪಶುಸಂಗೋಪನೆ ಮತ್ತು ಮೀನುಗಾರಿಕೆ ಅಭಿವೃದ್ಧಿ ಕ್ಷೇತ್ರಗಳಿಗೆ ಸಂಬಂಧಿಸಿದ ಒಪ್ಪಂದಗಳಿಗೆ ಅಂಕಿತ ಹಾಕಲಾಗಿದೆ

ನವದೆಹಲಿಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ನೇಪಾಳ ಪ್ರಧಾನಮಂತ್ರಿ ಬಾಲೇಂದ್ರ ಶಾ ಅವರ ನಡುವಿನ ದ್ವಿಪಕ್ಷೀಯ ಮಾತುಕತೆಯ ಬಳಿಕ ಈ ಒಪ್ಪಂದಗಳಿಗೆ ಸಹಿ ಹಾಕಲಾಯಿತು.

ಬಳಿಕ ನಡೆದ ಸುದ್ದಿಗೋಷ್ಠಿಯಲ್ಲಿ ಪ್ರಧಾನಿ, ಭಾರತ-ನೇಪಾಳ ಸಂಬಂಧಗಳು ಹಂಚಿಕೆಯ ಇತಿಹಾಸ, ನಂಬಿಕೆ, ಸಂಸ್ಕೃತಿ ಮತ್ತು ಜನರ ನಡುವಿನ ಸಂಪರ್ಕಗಳ ಆಧಾರದ ಮೇಲೆ ನಿಂತಿವೆ ಎಂದು ತಿಳಿಸಿದರು.

ಉಭಯ ರಾಷ್ಟ್ರಗಳು ಪರಸ್ಪರ ಪ್ರಗತಿಯಲ್ಲಿ ಪಾಲುದಾರರಾಗಿದ್ದು, ಕಷ್ಟದ ಸಮಯದಲ್ಲಿ ಪರಸ್ಪರ ಬೆಂಬಲವಾಗಿ ನಿಂತಿವೆ ಎಂದ ಅವರು, ಪ್ರಸಕ್ತ ವರ್ಷದ ಆಗಸ್ಟ್‌ನಲ್ಲಿ ನೇಪಾಳದಲ್ಲಿ ಸಂಭವಿಸಿದ ಭೀಕರ ಪ್ರವಾಹದಿಂದ ಉಂಟಾದ ಜೀವಹಾನಿಗೆ ಅವರು ಸಂತಾಪ ಸೂಚಿಸಿದರು.

ನೇಪಾಳದ ಪುನರ್ನಿರ್ಮಾಣ ಮತ್ತು ದೀರ್ಘಕಾಲೀನ ಅಭಿವೃದ್ಧಿಗೆ ಹೊಸ ಶಕ್ತಿ ನೀಡಲು ೨೪ ಸಾವಿರ ಕೋಟಿ ನೇಪಾಳ ರೂಪಾಯಿ ಮೌಲ್ಯದ ಅಭಿವೃದ್ಧಿ ಸಹಕಾರ ಪ್ಯಾಕೇಜ್ ಅನ್ನು ಪ್ರಧಾನಮಂತ್ರಿ ಘೋಷಿಸಿದರು.

ಬಳಿಕ ಮಾತನಾಡಿದ ನೇಪಾಳ ಪ್ರಧಾನಿ ಬಾಲೇಂದ್ರ ಶಾ, ಭಾರತ-ನೇಪಾಳದ ವಿಶ್ವಾಸಾರ್ಹ ಪಾಲುದಾರನಾಗಿದ್ದು, ಈ ನಂಬಿಕೆಯು ಹಿಮಾಲಯದಷ್ಟು ಎತ್ತರಕ್ಕೆ ನಿಂತಿದೆ ಎಂದು ಹೇಳಿದರು. ಬಿಕ್ಕಟ್ಟಿನ ಸಂದರ್ಭದಲ್ಲಿ ಭಾರತವು ಯಾವಾಗಲೂ ಮೊದಲು ಪ್ರತಿಕ್ರಿಯಿಸುವ ರಾಷ್ಟ್ರವಾಗಿದೆ ಎಂದು ಅವರು ತಿಳಿಸಿದರು.

ಮಾತುಕತೆಯ ನಂತರ ಉಭಯ ಪ್ರಧಾನಮಂತ್ರಿಗಳು ರೈಲ್ವೆ ತಂತ್ರಜ್ಞಾನಗಳ ಪ್ರಾತ್ಯಕ್ಷಿಕೆ ಮತ್ತು ಗತಿಶಕ್ತಿ ಪೋರ್ಟಲ್ ಕುರಿತ ಪ್ರಸ್ತುತಿಯನ್ನು ವೀಕ್ಷಿಸಿದರು.

ಇಬ್ಬರೂ ನಾಯಕರು ಭಾರತದ ಧಾರ್ಚುಲಾ ಮತ್ತು ನೇಪಾಳದ ದಾರ್ಚುಲಾವನ್ನು ಸಂಪರ್ಕಿಸುವ ವಾಹನ ಸಂಚಾರ ಯೋಗ್ಯ ರಸ್ತೆ ಸೇತುವೆಯನ್ನು ಉದ್ಘಾಟಿಸಿದರು ಮತ್ತು ಮೋತಿಹಾರಿ-ಅಮ್ಲೇಖ್‌ಗಂಜ್ ಕೊಳವೆಮಾರ್ಗದ ಎರಡನೇ ಹಂತ ರಾಷ್ಟ್ರಕ್ಕೆ ಸಮರ್ಪಿಸಿದರು.

---

ಗುರುನಾನಕ್ ದೇವ್ ಅವರ ಪ್ರಕಾಶ್ ಪರ್ವದ ಮುನ್ನಾದಿನವಾದ ಇಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾರತ ಮತ್ತು ವಿದೇಶಗಳಲ್ಲಿ ನೆಲೆಸಿರುವ ಭಾರತೀಯರಿಗೆ ಶುಭಾಶಯಗಳನ್ನು ತಿಳಿಸಿದ್ದಾರೆ.

ಗುರುನಾನಕ್ ದೇವ್ ಅವರು ನೀಡಿರುವ 'ಇಕ್ ಓಂಕಾರ್' ಸಂದೇಶ ಇಡೀ ಮನುಕುಲದ ಏಕತೆಯ ಸಂದೇಶವಾಗಿದೆ. ಜಾತಿ ತಾರತಮ್ಯ, ಸಾಮಾಜಿಕ ಶ್ರೇಣೀಕರಣ ಮತ್ತು ಭೇದಭಾವಗಳಿಂದ ಮುಕ್ತವಾದ ಸಮಾಜವನ್ನು ನಿರ್ಮಿಸುವ ಅಗತ್ಯವನ್ನು ಗುರುನಾನಕ್ ದೇವ್ ಪ್ರತಿಪಾದಿಸಿದ್ದರು ಎಂದು ರಾಷ್ಟ್ರಪತಿ ಸಾಮಾಜಿಕ ಮಾಧ್ಯಮ ಸಂದೇಶದಲ್ಲಿ ಸ್ಮರಿಸಿದ್ದಾರೆ.

ಗುರುನಾನಕ್ ದೇವ್ ಜಿ ಅವರ ಪ್ರಕಾಶ್ ಪರ್ವ ಮುನ್ನಾದಿನವಾದ ಇಂದು ಪ್ರಧಾನಿ ನರೇಂದ್ರ ಮೋದಿ ಅವರಿಂದು, ನವದೆಹಲಿಯಲ್ಲಿರುವ ಲೆಫ್ಟಿನೆಂಟ್ ಗವರ್ನರ್ ತರಣ್‌ಜಿತ್ ಸಿಂಗ್ ಸಂಧು ಅವರ ನಿವಾಸವಾದ ಲೋಕ ನಿವಾಸದಲ್ಲಿ ಶಬದ್ ಕೀರ್ತನ್ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

---

ಸರ್ಕಾರದ ಸಮಗ್ರ ವಿಧಾನದ ಮೂಲಕ ಭಾರತವು ೫೦ ಕೋಟಿ ಜನರನ್ನು ತೀವ್ರ ಬಡತನದಿಂದ ಮೇಲಕ್ಕೆತ್ತಿದೆ ಎಂದು ಕೃಷಿ ಮತ್ತು ರೈತರ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಇಂದು ತಿಳಿಸಿದ್ದಾರೆ.

ನವದೆಹಲಿಯಲ್ಲಿ ನಡೆದ 'ಭಾರತದಲ್ಲಿ ಬಡತನ ನಿರ್ಮೂಲನೆಯಲ್ಲಿ ಕೃಷಿಯ ಪಾತ್ರ ಮತ್ತು ಕೊಡುಗೆ' ಕುರಿತ ಕಾರ್ಯಾಗಾರವನ್ನು ಉದ್ದೇಶಿಸಿ ಮಾತನಾಡಿದ ಅವರು, ಈ ಮಹತ್ವದ ಸಾಧನೆಯಲ್ಲಿ ಕೃಷಿ ಕ್ಷೇತ್ರವು ಪ್ರಮುಖ ಪಾತ್ರ ವಹಿಸುತ್ತಿದೆ ಎಂದು ಹೇಳಿದರು.

ದೇಶದಲ್ಲಿ ಬಡತನ ನಿರ್ಮೂಲನೆಯ ವೇಗವನ್ನು ಶ್ಲಾಘಿಸಿರುವ ವಿಶ್ವಬ್ಯಾಂಕ್‌ನ ಇತ್ತೀಚಿನ ವರದಿಯನ್ನು ಶ್ರೀ ಚೌಹಾಣ್ ಈ ಸಂದರ್ಭದಲ್ಲಿ ಉಲ್ಲೇಖಿಸಿದರು. ಈ ಸಾಧನೆಗೆ ಕೊಡುಗೆ ನೀಡಿದ ಕೃಷಿ ಅಧಿಕಾರಿಗಳು, ಸಂಶೋಧಕರು ಮತ್ತು ಇತರ ಪಾಲುದಾರರನ್ನು ಅವರು ಅಭಿನಂದಿಸಿದರು.

---

ವಾಟ್ಸಾಪ್ ವೆಬ್ ಬಳಸುವಾಗ ಎಚ್ಚರಿಕೆ ವಹಿಸುವಂತೆ ಕೇಂದ್ರ ಗೃಹ ಸಚಿವಾಲಯ ಸಾರ್ವಜನಿಕರಿಗೆ ಸಲಹೆ ನೀಡಿದೆ. ದೃಢೀಕರಿಸಿದ ವಾಟ್ಸಾಪ್ ವೆಬ್ ಸೆಷನ್ ಅನ್ನು ದುರುಪಯೋಗಪಡಿಸಿಕೊಂಡು ದುಷ್ಕರ್ಮಿಗಳು ಖಾತೆಗೆ ಅನಧಿಕೃತ ಪ್ರವೇಶ ಪಡೆಯುವ ಸಾಧ್ಯತೆಯಿದೆ ಎಂದು ಭಾರತೀಯ ಸೈಬರ್ ಅಪರಾಧ ಸಮನ್ವಯ ಕೇಂದ್ರ ಎಚ್ಚರಿಸಿದೆ.

ಇದರಿಂದ ಬಳಕೆದಾರರ ಸಂದೇಶಗಳನ್ನು ಓದಲು, ಅವರ ಹೆಸರಿನಲ್ಲಿಯೇ ಇತರರಿಗೆ ಸಂದೇಶ ಕಳುಹಿಸಲು ಹಾಗೂ ಸಂಪರ್ಕಗಳು ಮತ್ತು ಗುಂಪು ಸಂಭಾಷಣೆಗಳನ್ನು ಬಳಸಿಕೊಂಡು ವಂಚನೆ, ಮತ್ತಿತರ ಕೃತ್ಯಗಳಿಗೆ ಬಳಕೆದಾರರ ಗುರುತನ್ನು ದುರುಪಯೋಗಪಡಿಸಿಕೊಳ್ಳಲು ಅವಕಾಶವಾಗುತ್ತದೆ ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಕಂಪ್ಯೂಟರ್‌ಗಳಲ್ಲಿ ವಾಟ್ಸಾಪ್ ವೆಬ್ ಮೂಲಕ ಕಚೇರಿ, ಹಣಕಾಸು ಅಥವಾ ಇತರ ಗೌಪ್ಯ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳದಿರುವಂತೆ ಸೂಚಿಸಲಾಗಿದೆ. ಬಳಕೆದಾರರು ವಾಟ್ಸಾಪ್ ವೆಬ್ ಅನ್ನು ಶಾಶ್ವತವಾಗಿ ಲಾಗಿನ್ ಆಗಿ ಇರಿಸಿಕೊಳ್ಳದೆ ಪ್ರತಿ ಸೆಷನ್ ನಂತರವೂ ಲಾಗ್ ಔಟ್ ಮಾಡಬೇಕು. ಅಲ್ಲದೆ, ಆಪರೇಟಿಂಗ್ ವ್ಯವಸ್ಥೆ, ಬ್ರೌಸರ್ ಹಾಗೂ ಭದ್ರತಾ ಸಾಫ್ಟ್‌ವೇರ್‌ಗಳನ್ನು ನವೀಕರಿಸುತ್ತಿರಬೇಕು ಮತ್ತು ಅನುಮಾನಾಸ್ಪದ ಮತ್ತು ಅಪರಿಚಿತ ಫೈಲ್‌ಗಳು, ಹಾಗೂ ದೋಷಪೂರಿತ ಸಾಫ್ಟ್‌ವೇರ್‌ಗಳಿಂದ ದೂರವಿರುವಂತೆ ಸಚಿವಾಲಯ ತಿಳಿಸಿದೆ.

---

ಡಿಜಿಟಲ್ ಪಾವತಿ ವಂಚನೆಗಳ ವಿರುದ್ಧ ಗ್ರಾಹಕರ ರಕ್ಷಣೆಯನ್ನು ಬಲಪಡಿಸುವ ನಿಟ್ಟಿನಲ್ಲಿ ವಿದ್ಯುನ್ಮಾನ ಬ್ಯಾಂಕಿಂಗ್ ವಹಿವಾಟುಗಳಿಗೆ ಹೆಚ್ಚುವರಿ ಮುನ್ನೆಚ್ಚರಿಕೆ ಸುರಕ್ಷತಾ ಕ್ರಮಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ -ಆರ್‌ಬಿಐ ಪ್ರಸ್ತಾಪಿಸಿದೆ. ಡಿಜಿಟಲ್ ಪಾವತಿ ವಿಧಾನಗಳ ಬಳಕೆಯ ರೀತಿ ಮತ್ತು ಮಿತಿಯ ಮೇಲೆ ಗ್ರಾಹಕರಿಗೆ ಹೆಚ್ಚಿನ ನಿಯಂತ್ರಣ ನೀಡಲು ಈ ಕರಡು ತಿದ್ದುಪಡಿ ನಿರ್ದೇಶನಗಳು ಉದ್ದೇಶಿಸಿವೆ.

ಬ್ಯಾಂಕಿಂಗ್ ಅಭ್ಯಾಸಗಳಲ್ಲಿ ಏಕರೂಪತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಬ್ಯಾಂಕ್‌ಗಳ ಲೋಪದೋಷಗಳಿಂದ ಗ್ರಾಹಕರನ್ನು ರಕ್ಷಿಸಲು 'ಬ್ಯಾಂಕ್‌ಗಳ ನಿರ್ಲಕ್ಷ್ಯ' ಎಂಬ ವ್ಯಾಖ್ಯಾನವನ್ನು ವಿಸ್ತರಿಸಲು ಸಹ ಆರ್‌ಬಿಐ ಪ್ರಸ್ತಾಪಿಸಿದೆ.

ಈ ಕರಡು ನಿರ್ದೇಶನಗಳು ವಾಣಿಜ್ಯ ಬ್ಯಾಂಕ್‌ಗಳು, ಸಣ್ಣ ಹಣಕಾಸು ಬ್ಯಾಂಕ್‌ಗಳು, ಪೇಮೆಂಟ್ಸ್ ಬ್ಯಾಂಕ್‌ಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು ಮತ್ತು ಸಹಕಾರಿ ಬ್ಯಾಂಕ್‌ಗಳಿಗೆ ಅನ್ವಯವಾಗುತ್ತವೆ. ಪ್ರಸ್ತಾವಿತ ತಿದ್ದುಪಡಿಗಳ ಕುರಿತು ೨೦೨೬ ರ ಡಿಸೆಂಬರ್ ೧೪ ರವರೆಗೆ ಬ್ಯಾಂಕ್‌ಗಳು, ಸಾರ್ವಜನಿಕರು ಮತ್ತು ಇತರ ಪಾಲುದಾರರಿಂದ ಆರ್‌ಬಿಐ ಅಭಿಪ್ರಾಯಗಳನ್ನು ಆಹ್ವಾನಿಸಿದೆ.

---

ಸೃಜನಶೀಲ ತಂತ್ರಜ್ಞಾನಗಳು ಮತ್ತು ಕೌಶಲ್ಯಾಭಿವೃದ್ಧಿಯಲ್ಲಿ ಭಾರತ-ಜಪಾನ್ ಸಹಕಾರವನ್ನು ಬಲಪಡಿಸುವ ನಿಟ್ಟಿನಲ್ಲಿ ಭಾರತೀಯ ಸೃಜನಶೀಲ ತಂತ್ರಜ್ಞಾನಗಳ ಸಂಸ್ಥೆ ಐಐಸಿಟಿ, ವಾಕಾಮ್ ಇಂಡಿಯಾದೊಂದಿಗೆ ತಿಳಿವಳಿಕಾ ಒಪ್ಪಂದಕ್ಕೆ ಸಹಿ ಹಾಕಿದೆ.

ಗೋವಾದಲ್ಲಿ ನಡೆಯುತ್ತಿರುವ ೫೭ನೇ ಭಾರತೀಯ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ೨೦೨೬ರ ಸಂದರ್ಭದಲ್ಲಿ ಈ ಒಪ್ಪಂದಕ್ಕೆ ಅಂಕಿತ ಹಾಕಲಾಯಿತು.

ಭಾರತೀಯ ವಿದ್ಯಾರ್ಥಿಗಳಿಗೆ ವೃತ್ತಿಪರ ಸೃಜನಶೀಲ ಪರಿಕರಗಳು, ಉದ್ಯಮ ಆಧಾರಿತ ತರಬೇತಿ ಮತ್ತು ಜಾಗತಿಕ ಮಟ್ಟದ ಅವಕಾಶಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಒದಗಿಸುವುದು ಈ ಪಾಲುದಾರಿಕೆಯ ಪ್ರಮುಖ ಗುರಿಯಾಗಿದೆ.

ಒಪ್ಪಂದದಡಿ ಐಐಸಿಟಿಯ ಅನಿಮೇಷನ್ ಸಿನಿಮಾ ವಿನ್ಯಾಸ, ಸಂವಾದಾತ್ಮಕ ವಿಡಿಯೊ ಗೇಮ್ ವಿನ್ಯಾಸ ಮತ್ತು ಅಭಿವೃದ್ಧಿ ಹಾಗೂ ನಿರ್ಮಾಣೋತ್ತರ ಮತ್ತು ವಿಜಿಯಲ್ ಎಫೆಕ್ಟ್ಸ್ ವಿಎಫ್‌ಎಕ್ಸ್ ಎಂಬ ಮೂರು, ಎರಡು ವರ್ಷಗಳ ಡಿಪ್ಲೊಮಾ ಕೋರ್ಸ್‌ಗಳಿಗೆ ದಾಖಲಾದ ೧೮ ವಿದ್ಯಾರ್ಥಿಗಳಿಗೆ ಶೇಕಡ ೫೦ ರಷ್ಟು ಬೋಧನ ಶುಲ್ಕ ವಿದ್ಯಾರ್ಥಿವೇತನ ದೊರೆಯಲಿದೆ.

---

ಸೃಜನಶೀಲ ತಂತ್ರಜ್ಞಾನಗಳು ಮತ್ತು ಕೌಶಲ್ಯಾಭಿವೃದ್ಧಿಯಲ್ಲಿ ಭಾರತ-ಜಪಾನ್ ಸಹಕಾರವನ್ನು ಬಲಪಡಿಸುವ ನಿಟ್ಟಿನಲ್ಲಿ ಭಾರತೀಯ ಸೃಜನಶೀಲ ತಂತ್ರಜ್ಞಾನಗಳ ಸಂಸ್ಥೆ ಐಐಸಿಟಿ, ವಾಕಾಮ್ ಇಂಡಿಯಾದೊಂದಿಗೆ ತಿಳಿವಳಿಕಾ ಒಪ್ಪಂದಕ್ಕೆ ಸಹಿ ಹಾಕಿದೆ.

ಗೋವಾದಲ್ಲಿ ನಡೆಯುತ್ತಿರುವ ೫೭ನೇ ಭಾರತೀಯ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ೨೦೨೬ರ ಸಂದರ್ಭದಲ್ಲಿ ಈ ಒಪ್ಪಂದಕ್ಕೆ ಅಂಕಿತ ಹಾಕಲಾಯಿತು.

ಭಾರತೀಯ ವಿದ್ಯಾರ್ಥಿಗಳಿಗೆ ವೃತ್ತಿಪರ ಸೃಜನಶೀಲ ಪರಿಕರಗಳು, ಉದ್ಯಮ ಆಧಾರಿತ ತರಬೇತಿ ಮತ್ತು ಜಾಗತಿಕ ಮಟ್ಟದ ಅವಕಾಶಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಒದಗಿಸುವುದು ಈ ಪಾಲುದಾರಿಕೆಯ ಪ್ರಮುಖ ಗುರಿಯಾಗಿದೆ.

ಒಪ್ಪಂದದಡಿ ಐಐಸಿಟಿಯ ಅನಿಮೇಷನ್ ಸಿನಿಮಾ ವಿನ್ಯಾಸ, ಸಂವಾದಾತ್ಮಕ ವಿಡಿಯೊ ಗೇಮ್ ವಿನ್ಯಾಸ ಮತ್ತು ಅಭಿವೃದ್ಧಿ ಹಾಗೂ ನಿರ್ಮಾಣೋತ್ತರ ಮತ್ತು ವಿಜಿಯಲ್ ಎಫೆಕ್ಟ್ಸ್ ವಿಎಫ್ಎಕ್ಸ್ ಎಂಬ ಮೂರು, ಎರಡು ವರ್ಷಗಳ ಡಿಪ್ಲೊಮಾ ಕೋರ್ಸ್‌ಗಳಿಗೆ ದಾಖಲಾದ ೧೮ ವಿದ್ಯಾರ್ಥಿಗಳಿಗೆ ಶೇಕಡ ೫೦ ರಷ್ಟು ಬೋಧನ ಶುಲ್ಕ ವಿದ್ಯಾರ್ಥಿವೇತನ ದೊರೆಯಲಿದೆ.

---

ಪಶ್ಚಿಮ ಬಂಗಾಳದ ಹೆಸರನ್ನು ವೆಸ್ಟ್ ಬೆಂಗಾಲ್ ಬದಲಿಗೆ ಪೊಶ್ಚಿಮ್ ಬಂಗಾ ಎಂದು ಮರು ನಾಮಕರಣ ಮಾಡುವ ಪ್ರಸ್ತಾವನೆಗೆ ಪಶ್ಚಿಮ ಬಂಗಾಳ ಸಚಿವ ಸಂಪುಟ ಇಂದು ಅನುಮೋದನೆ ನೀಡಿದೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸುವೇಂದು ಅಧಿಕಾರಿ, ಡಿಸೆಂಬರ್ ೪ ರಿಂದ ೧೪ರವರೆಗೆ ನಡೆಯಲಿರುವ ವಿಧಾನಸಭೆ ಚಳಿಗಾಲದ ಅಧಿವೇಶನದಲ್ಲಿ ಡಿಸೆಂಬರ್ ೯ ರಂದು ಈ ಪ್ರಸ್ತಾವನೆಯನ್ನು ಮಂಡಿಸಲಾಗುವುದು. ರಾಜ್ಯ ವಿಧಾನಸಭೆಯಲ್ಲಿ ಅನುಮೋದನೆ ದೊರೆತ ನಂತರ ಅದನ್ನು ಕೇಂದ್ರ ಸರ್ಕಾರದ ಒಪ್ಪಿಗೆಗಾಗಿ ಕಳುಹಿಸಲಾಗುವುದು ಎಂದು ತಿಳಿಸಿದರು.

---

ಅಂತಾರಾಷ್ಟ್ರೀಯ ಮಹಿಳಾ ದೌರ್ಜನ್ಯ ನಿರ್ಮೂಲನೆ ದಿನದ ಅಂಗವಾಗಿ ಗ್ರಾಮೀಣಾಭಿವೃದ್ಧಿ ಸಚಿವಾಲಯ ತನ್ನ ರಾಷ್ಟ್ರೀಯ ಅಭಿಯಾನವಾದ 'ನಯಿ ಚೇತನಾ - ಪಹಲ್ ಬದಲಾವ್ ಕಿ' ಇದರ ೫ನೇ ಆವೃತ್ತಿಯನ್ನು ನಾಡಿದ್ದು, ಇದೇ ೨೫ ರಂದು ಆರಂಭಿಸಲಿದೆ.

---

ಆತಿಥೇಯ ನ್ಯೂಜಿಲೆಂಡ್ ವಿರುದ್ಧದ ಮೂರು ಪಂದ್ಯಗಳ ಭಾರತ-ನ್ಯೂಜಿಲೆಂಡ್ 'ಸೆಂಚುರಿ ಆಫ್ ಸ್ಪೋರ್ಟಿಂಗ್ ಯೂನಿಟಿ' ಸರಣಿಯನ್ನು ಭಾರತ ೧-೦ ಅಂತರದಿಂದ ಗೆದ್ದುಕೊಂಡಿದೆ.

ಆಕ್ಲೆಂಡ್‌ನಲ್ಲಿ ನಡೆದ ಅಂತಿಮ ಪಂದ್ಯವನ್ನು ೨-೨ ಗೋಲುಗಳಿಂದ ಡ್ರಾ ಮಾಡಿಕೊಳ್ಳುವ ಮೂಲಕ ಭಾರತ ಪುರುಷರ ಹಾಕಿ ತಂಡ ಮೂರು ಪಂದ್ಯಗಳ ಸರಣಿಯಲ್ಲಿ ಅಜೇಯವಾಗಿ ಉಳಿಯಿತು.

_____ ಮುಕ್ತಾಯ _____